ದಿನಾಂಕಃ 03.04.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಿಪಿ 12 ರಲ್ಲಿ ತೋರಿಸಿರುವ ವಾದಿ ಮತ್ತು 2 ರಿಂದ 8 ನೇ ಪ್ರತಿವಾದಿಯರು ರಜಿನಾರವರ ವಾರಸುದಾರರು ಎಂದರೆ ಸರಿ. ನಾನು ದಾವಾಸ್ವತ್ತನ್ನು ಖರೀದಿಸುವಾಗ ರಜಿನಾರವರು ಅವರ ಕುಟುಂಬದ ವಂಶವೃಕ್ಷವನ್ನು ನನಗೆ ಕೊಟ್ಟಿರಲಿಲ್ಲ. ನಾನು ರಜಿನಾರವರ ಬಳಿ ಅವರ ಕುಟುಂಬದ ವಂಶವೃಕ್ಷವನ್ನು ಕೊಡಿ ಎಂದು ಕೇಳಿದ್ದೆನು ಆದರೆ ಅವರು ನೀಡಲಿಲ್ಲ. ರಜಿನಾರವರಿಗೆ ಸಂಬಂದಿಸಿದ ಕಂದಾಯ ರಸೀದಿಗಳು, ಪಹಣಿ ಹಾಗೂ ಮ್ಯುಟೇಷನ್ ಹಾಗೂ ಅವರು ಖರೀದಿಸಿದ ಸ್ವತ್ತಿನ ಕ್ರಯಪತ್ರಗಳನ್ನು

ನಾನು ದಾವಾಸ್ವತ್ತನ್ನು ಖರೀದಿಸುವಾಗ ಪರಿಶೀಲನೆ ಮಾಡಿರುತ್ತೇನೆ. ದಾವಾಸ್ವತ್ತನ್ನು ಖರೀದಿಸುವಾಗ ನಾನು ವಕೀಲರ ಅಭಿಪ್ರಾಯವನ್ನು ಪಡೆದುಕೊಳ್ಳಲಿಲ್ಲ. ದಾವಾಸ್ವತ್ತನ್ನು ಖರೀದಿಸುವಾಗ ನಾನು ಪತ್ರಿಕಾ ಪ್ರಕಟಣೆಯನ್ನು ನೀಡಿರುವುದಿಲ್ಲ ಕಾರಣ ಅದರ ಅವಶ್ಯಕತೆ ಇರಲಿಲ್ಲ. ನಿಪಿ 1 ರ ಕ್ರಯಪತ್ರದಂತೆ ನಾನು ದಾವಾಸ್ವತ್ತನ್ನು ರಜಿನಾ, ಚಂದ್ರಶೇಖರ್, ಕೆನೆಡಿ ಹಾಗೂ ರಜಿನಾರವರ ಮಗಳು ಅರುಣಾರವರಿಂದ ಖರೀದಿಸಿರುತ್ತೇನೆ. ನಿಪಿ 1 ರ ಕ್ರಯಪತ್ರದಲ್ಲಿ ಅರುಣಾರವರು ಮಾರಾಟಗಾರರಾಗಿ ತೋರಿಸಿರುವುದಿಲ್ಲ ಎಂದರೆ ಸರಿ. ಆದರೆ ಅವರು ಅನುಮತಿ ನೀಡಿ ಸಾಕ್ಷಿದಾರರಾಗಿರುತ್ತಾರೆ ಎಂದು ಹೇಳುತ್ತಾರೆ. ನಿಪಿ 1 ರಲ್ಲಿ ಕೇವಲ ಅರುಣ ಎಂದು ಹೆಸರು ಬರೆದಿರುವುದು ಹೊರತುಪಡಿಸಿ ಅವರ ಸಂಪೂರ್ಣ ವಿಳಾಸ ನಮೂದು ಮಾಡಿರುವುದಿಲ್ಲ ಎಂದರೆ ಸರಿ.

ನಿಪಿ 13 ರ ರಾಜಿ ಅರ್ಜಿಯಂತೆ ಚಂದ್ರಶೇಖರರವರ ಭಾಗಕ್ಕೆ ಸರ್ವೆ ನಂಬರು 2 ರಲ್ಲಿ 6 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ನಿಪಿ 13 ರ ರಾಜಿ ಅರ್ಜಿಯಂತೆ ಕೆನಡಿಯವರ ಭಾಗಕ್ಕೆ ಸರ್ವೆ ನಂಬರು 2 ರಲ್ಲಿ 6 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಅವರು ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಿಪಿ 1 ರ ಕ್ರಯಪತ್ರದಲ್ಲಿ ರಜಿನಾರವರ ಗಂಡ ಮತ್ತು ಉಳಿದ 6 ಜನ ಮಕ್ಕಳು ಮಾರಾಟಗಾರರಾಗಿರುವುದಿಲ್ಲ ಎಂದರೆ ಸರಿ. ನಾನು ಖರೀದಿ ಮಾಡುವಾಗ ಸರ್ವೆ ನಂಬರು 2 ಒಟ್ಟು ಕುಟುಂಬದ ಆಸ್ತಿಯಾಗಿತ್ತು ಎನ್ನುವ ವಿಚಾರ ಗೊತ್ತಿತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದು ಒಟ್ಟು ಕುಟುಂಬದ ಆಸ್ತಿಯಾಗಿರಲಿಲ್ಲ ಅದು ರಜಿನಾರವರ ಸ್ವಯಾರ್ಜಿತ ಆಸ್ತಿಯಾಗಿತ್ತು ಎಂದು ಹೇಳುತ್ತಾರೆ. ನಿಪಿ 1 ರ ಕ್ರಯಪತ್ರ ಆಗುವ

ದಿನದಂದು ರಜಿನಾರವರೇ ಸ್ವತಃ ಅವರ ಮೂರು ಮಕ್ಕಳನ್ನು ಕರೆದುಕೊಂಡು ಬರುತ್ತೇನೆ ಎಂದು ಕರೆದುಕೊಂಡು ಬಂದು ಅವರ ಸಹಿಗಳನ್ನು ಮಾಡಿಸಿರುತ್ತಾರೆ ಎಂದು ಹೇಳುತ್ತಾರೆ. ನಿಪಿ 1ರ ಕ್ರಯಪತ್ರವನ್ನು ಬರೆದುಕೊಡುವ ಕಾಲದಲ್ಲಿ ರಜಿನಾರವರಿಗಾಗಲೀ, ಅವರ ಇಬ್ಬರು ಮಕ್ಕಳಿಗಾಗಲೀ, ಕ್ರಯಪತ್ರವನ್ನು ಬರೆದುಕೊಡುವ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ನಿಪಿ 1ರ ಕ್ರಯಪತ್ರದಲ್ಲಿ ತೋರಿಸಿರುವ ಶೆಡನ್ನು ನಾನು ಧ್ವಂಸ ಮಾಡಿರುವುದಿಲ್ಲ. ನನಗೆ ಮಾರಾಟ ಮಾಡಿದ ಚಂದ್ರಶೇಖರ್, ಕೆನಡಿ ರವರು ಅಂದಾಜು 2000 ಇಸವಿಯಲ್ಲಿ ಧ್ವಂಸ ಮಾಡಿದ್ದು ಅವರ ವಿರುದ್ಧ ನಾನು ದಾವೆಯನ್ನು ಸಲ್ಲಿಸಿದ್ದೆನು. ಆದರೆ ಯಾವ ದಿನಾಂಕ ಮತ್ತು ತಿಂಗಳು ಎಂದು ನನಗೆ ನೆನಪಿಲ್ಲ. ಆ ವೇಳೆಯಲ್ಲಿ ಪೊಲೀಸರಿಗೆ ನಾನು ಯಾವುದೇ ದೂರನ್ನು ಸದರಿಯವರ ವಿರುದ್ಧ ನೀಡಿರುವುದಿಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಮಂಗಳೂರು ಹಂಚಿನ ಮನೆಯನ್ನು ನಾನು ಧ್ವಂಸ ಮಾಡಿದ್ದೇನೆ ಎಂದು ತಿಳಿಸಿದ್ದು ಅದು ತಪ್ಪಾಗಿ ಬೆರಳಚ್ಚು ಆಗಿರಬಹುದು. ಆದರೆ ಮನೆಯನ್ನು ಚಂದ್ರಶೇಖರ್ ಮತ್ತು ಕೆನಡಿಯವರು ಧ್ವಂಸ ಮಾಡಿದ್ದರು ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಮಂಗಳೂರು ಹಂಚಿನ ಮನೆಯನ್ನು ನಾನು ಧ್ವಂಸ ಮಾಡಿದ್ದೇನೆ ತಿಳಿಸಿರುವ ವಿಚಾರವನ್ನು ನನ್ನ ವಾದಪತ್ರದಲ್ಲೂ ಸಹ ತಿಳಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಅದು ತಪ್ಪಿ ನಿಂದ ನಮೂದಾಗಿದೆ ಎಂದು ಹೇಳುತ್ತಾರೆ.

ನಿವೇಶನ ಸಂಖ್ಯೆ 17 ಎಂದು ನಾನು ಖರೀದಿಸಿದ ಮಾಲೀಕರು ಅದಕ್ಕೆ

ಸಂಖ್ಯೆಯನ್ನು ನೀಡಿರುತ್ತಾರೆ. ಸರ್ವೆ ನಂಬರು 2 ರ 1 ಎಕರೆ 20 ಗುಂಟೆ ಜಮೀನಿನಲ್ಲಿ ರಜಿನಾರವರು ನಿವೇಶನಗಳನ್ನು ಮಾಡಿರುತ್ತಾರೆ. ಅಂದಾಜು 28 ನಿವೇಶನಗಳನ್ನು ರಜಿನಾರವರು ಮಾಡಿರುತ್ತಾರೆ. 1992 ರಲ್ಲಿ ರಜಿನಾರವರು ಲೇಔಟನ್ನು ಮಾಡಿದ್ದರು. ಸದರಿ ಲೇಔಟ್ ಅಂದಿನಿಂದ ಇಲ್ಲಿಯವರೆಗೆ ಅನುಮೋದನೆಗೊಂಡಿರುವುದಿಲ್ಲ. ಸಾಮಾನ್ಯವಾಗಿ ಬಡಾವಣೆಯನ್ನು ನಿರ್ಮಾಣ ಮಾಡುವಾಗ ಸಂಬಂದಪಟ್ಟ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಳ್ಳಬೇಕು ಎಂದರೆ ಸರಿ. ನಿಪಿ 5 ಯಾವುದೇ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವುದಿಲ್ಲ ಎಂದರೆ ಸರಿ. ನಿಪಿ 5 ನ್ನು ನನ್ನ ಮಾಲೀಕರಾದ ರಜಿನಾರವರು ನನಗೆ ನೀಡಿದ್ದರು. ಲೇಔಟ್ ನಿರ್ಮಿಸುವಾಗ ರಜಿನಾರವರು ಅಭಿವೃದ್ಧಿ ಶುಲ್ಕವನ್ನು ಪಾವತಿಸಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಪಿ 5 ರ ಮೂಲ ದಾಖಲೆ ಮಾಲೀಕರ ಬಳಿ ಇದೆ. ನಿಪಿ 5 ರ ಲೇಔಟ್ ನಕ್ಷೆಯ ಪ್ರಕಾರ ಅಲ್ಲಿ ಯಾವುದೇ ನಿವೇಶನಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 5 ನ್ನು ರಜಿನಾರವರು ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಿಪಿ 5 ನ್ನು ನಾನು ಈ ದಾವೆಯ ಸಲುವಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ 1 ರಂತೆ ಸ್ವತ್ತನ್ನು ಖರೀದಿಸುವ ಕಾಲದಲ್ಲಿ ಯಾವುದೇ ಬಡಾವಣೆಗಳು ಇರಲಿಲ್ಲ ಎಂದರೆ ಸರಿ. ನಾನು ದಾವಾಸ್ವತ್ತನ್ನು ಖರೀದಿಸುವ ಕಾಲದಲ್ಲಿ ಅದು ಕೃಷಿ ಜಮೀನು ಆಗಿತ್ತು ಎಂದರೆ ಸರಿಯಲ್ಲ. ನಾನು ಖರೀದಿಸಿದ ದಾವಾಸ್ವತ್ತು ಕೃಷಿ ಜಮೀನಿನಲ್ಲಿ ಇತ್ತು ಎಂದರೆ ಸರಿ. ದಾವಾಸ್ವತ್ತು ಆ ವೇಳೆಯಲ್ಲಿ ಉತ್ತರಳ್ಳಿ ಪಂಚಾಯತಿ ವ್ಯಾಪ್ತಿಗೆ ಬರುತ್ತಿತ್ತು. ನಿಪಿ 1 ರ ಕ್ರಯಪತ್ರದಲ್ಲಿ ದಾವಾಸ್ವತ್ತು ಉತ್ತರಳ್ಳಿ ಗ್ರಾಮ

ಪಂಚಾಯತಿಗೆ ಬರುತಿತ್ತು ಎಂದು ನಮೂದಿಸಿಲ್ಲ ಎಂದರೆ ಸರಿ. ಗ್ರಾಮ ಠಾಣಾ ಸಂಖ್ಯೆ 2 ಎಂದು ಪಂಚಾಯತಿಯವರು ನೀಡಿರುತ್ತಾರೆ. ಗ್ರಾಮ ಠಾಣಾ ಸಂಖ್ಯೆ 2 ಎಂದು ತೋರಿಸುವ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ಚಕ್ಕುಬಂದಿಯನ್ನು ನನ್ನ ಮನಸ್ಸಿಗೆ ಬಂದಂತೆ ನಾನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ 2 ರಲ್ಲಿ ನಿವೇಶನ ಸಂಖ್ಯೆ 17 ಸರ್ವೆ ನಂಬರು 2 ರಲ್ಲಿ ಬರುತ್ತದೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ನಿಪಿ 2 ರಲ್ಲಿ ಮಂಗಳೂರು ಹಂಚಿನ ಮನೆ ಇರುವ ಬಗ್ಗೆ ತೋರಿಸಿರುವುದಿಲ್ಲ ಎಂದರೆ ಸರಿ. ನಿಪಿ 2 ನ್ನು ಈ ದಾವೆಯ ಸಲುವಾಗಿ ಸೃಷ್ಟಿಸಿದ ದಾಖಲೆ ಆಗಿದೆ ಎಂದರೆ ಸರಿಯಲ್ಲ. 2007-08 ರಲ್ಲಿ ಅರೆಹಳ್ಳಿ ಗ್ರಾಮ ಬಿಬಿಎಂಪಿ ವ್ಯಾಪ್ತಿಗೆ ಸೇರಿರುತ್ತದೆ ಎಂದರೆ ಸರಿ. ಬಿಬಿಎಂಪಿ ವ್ಯಾಪ್ತಿಗೆ ಬಂದ ಬಳಿಕ ನಾನು ಸದರಿ ಪ್ರಾಧಿಕಾರಕ್ಕೆ ಅಭಿವೃದ್ದಿ ಶುಲ್ಕವನ್ನು ತೆಗೆದುಕೊಳ್ಳಿ ಎಂದು ಅರ್ಜಿಯನ್ನು ಕೊಟ್ಟಿದ್ದೆನು. ಅದರಂತೆ ನಾನು ದಾವಾಸ್ವತ್ತಿಗೆ ಸಂಬಂದಿಸಿದಂತೆ ಅಭಿವೃದ್ದಿ ಶುಲ್ಕವನ್ನು ಕಟ್ಟಿರುವುದಿಲ್ಲ. ಸದರಿ ಅರ್ಜಿಯ ಪ್ರತಿ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಈಗ ಆಗುವುದಿಲ್ಲ.

2013 ರಲ್ಲಿ ನನಗೆ ದಾವಾಸ್ವತ್ತಿಗೆ ಸಂಬಂದಿಸಿದಂತೆ ಬಿ ಖಾತಾವನ್ನು ನಿಪಿ 3 ರಂತೆ ನೀಡಿರುತ್ತಾರೆ. ನಿಪಿ 3 ರ ಕಾಲದಲ್ಲಿ ಮಂಗಳೂರು ಹಂಚಿನ ಮನೆ ಇರಲಿಲ್ಲ. ನಿಪಿ 3 ರಲ್ಲಿ ಸರ್ವೆ ನಂಬರು 2 ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಆಸ್ತಿ ಸಂಖ್ಯೆ 2/17 ಎಂದು ನಮೂದಿಸಿರುತ್ತಾರೆ ಎಂದು ಹೇಳುತ್ತಾರೆ. ದಾವಾಸ್ವತ್ತಿಗೆ ಬಿಬಿಎಂಪಿ ಯವರು ಯಾವುದೇ ಖಾತೆಯನ್ನು ನೀಡಿರುವುದಿಲ್ಲ ಎಂದರೆ

ಸರಿಯಲ್ಲ. ನಿಪಿ 3 ನ್ನು ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಖರೀದಿಸಿದ ದಿನದಿಂದ ಇಲ್ಲಿಯವರಗೆ ನಾನು ಯಾವುದೇ ಕಂದಾಯವನ್ನು ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಕಂದಾಯ ಪಾವತಿಸಿರುವ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ದಾವಾಸ್ವತ್ತಿನ ಸಂಬಂದವಾಗಿ ನಾನು ನನ್ನ ಮಾಲೀಕರೊಂದಿಗೆ ಶಾಮೀಲಾಗಿರುವ ಕಾರಣ ಹಾಗೂ ದಾವಾಸ್ವತ್ತು ಅಸ್ತಿತ್ವದಲ್ಲಿ ಇರದ ಕಾರಣ ಯಾವುದೇ ಕಂದಾಯವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಒ.ಎಸ್ 4210/2003 ದಾವೆ ನನ್ನ ಮಾರಾಟಗಾರರಾದ ಚಂದ್ರಶೇಖರ್ ಹಾಗೂ ಕೆನಡಿಯವರ ವಿರುದ್ಧ ಸಲ್ಲಿಸಿದ ದಾವೆ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರತಿವಾದಿ ಪಕ್ಷಗಾರರಾಗಿರುವುದಿಲ್ಲ. ಸದರಿ ದಾವೆಯಲ್ಲಿ ಆ ದಾವೆಯ ಪ್ರತಿವಾದಿಗಳು ಮಂಗಳೂರು ಹಂಚಿನ ಮನೆಯನ್ನು ಧ್ವಂಸ ಮಾಡಿದ್ದರು ಎಂದು ತಿಳಿಸಿರುವುದಿಲ್ಲ ಎಂದರೆ ಸರಿ. ನಿಪಿ 9 ಮತ್ತು ನಿಪಿ 10 ರಂತೆ ಈ ದಾವೆಯ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ collusive ದಾವೆಯನ್ನು ಸಲ್ಲಿಸಿದ್ದೆನು ಎಂದರೆ ಸರಿಯಲ್ಲ. ಒ.ಎಸ್ 282/2000 ದಾವೆಯ ಬಗ್ಗೆ ನಾನು ರಜಿನಾರವರ ಬಳಿ ಪ್ರಶ್ನಿಸಿರುತ್ತೇನೆ. ಆ ವೇಳೆಯಲ್ಲಿ ರಜಿನಾರವರು ನನ್ನ ನಿವೇಶನಕ್ಕೆ ಯಾವುದೇ ರೀತಿಯ ತೊಂದರೆ ಆಗಿರುವುದಿಲ್ಲ ಎಂದು ತಿಳಿಸಿದ್ದರು. ಆ ಬಗ್ಗೆ ರಜಿನಾರವರು ಬರವಣಿಗೆ ಮೂಲಕ ಏನನ್ನೂ ನೀಡಿರುವುದಿಲ್ಲ. ಚಂದ್ರಶೇಖರ್ ಹಾಗೂ ಕೆನಡಿಯವರು ನನ್ನ ಸಂಪರ್ಕದಲ್ಲಿ ಈಗ ಇಲ್ಲ. ಚಂದ್ರಶೇಖರ್ ಹಾಗೂ ಕೆನಡಿಯವರು ಮೋಸ ಮಾಡಿರುತ್ತಾರೆ ಎನ್ನುವ ಉದ್ದೇಶದಿಂದ ಹಾಗೂ ನನ್ನ ದಾವಾಸ್ವತ್ತನ್ನು

ಉಳಿಸಿಕೊಳ್ಳುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಒ.ಎಸ್ 282/2000 ದಾವೆಯನ್ನು ಪ್ರಶ್ನಿಸಿ ನಾನು ಈ ದಾವೆಯಲ್ಲಿ ಪ್ರಶ್ನಿಸಿರುವುದಿಲ್ಲ ಹಾಗೂ ಪ್ರತ್ಯೇಕವಾಗಿ ಪ್ರಶ್ನಿಸಿ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ಒ.ಎಸ್ 4603/2014 ದಾವೆಯಲ್ಲಿ ನಾನಗಲೀ, ಪ್ರತಿವಾದಿಯಾಗಲೀ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ದಾವಾಸ್ವತ್ತಾಗಲೀ, ಪ್ರತಿವಾದಿಯ 10 ವರೆ ಗುಂಟೆ ಜಮೀನಿನ ಸಂಬಂದ ವಿವಾದ ಇರುವುದಿಲ್ಲ ಎಂದರೆ ಸರಿ.

ನಿಪಿ15 ರ ವಿರುದ್ದ ವೆಂಕಟರಮಣಪ್ಪರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್.ಎಫ್.ಎ 2013/2023 ರಂತೆ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನಿಪಿ 15 ರ ಪ್ರಕರಣ ನಿವೇಶನ ಸಂಖ್ಯೆ 9 ಕ್ಕೆ ಸಂಬಂದಪಟ್ಟಿದ್ದು ಆಗಿರುತ್ತದೆ ಎಂದರೆ ಸರಿ. ನಿಪಿ 15 ರಲ್ಲಿ ಸರ್ವೆ ನಂಬರು 2 ರ ಮಾಲೀಕರು ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ಆರ್.ಎಫ್.ಎ 2013/2023 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಎರಡೂ ಪಕ್ಷಗಾರರು ನಿವೇಶನ 9 ಕ್ಕೆ ಸಂಬಂದಿಸಿದಂತೆ ಯಥಾಸ್ಥಿತಿ ಕಾಪಾಡಿಕೊಳ್ಳಿ ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ. ನಿಪಿ 15 ನ್ನು ಹಾಜರುಪಡಿಸುವ ಕಾಲಕ್ಕೆ ಅದರ ವಿರುದ್ದ ಮೇಲ್ಮನವಿ ಇರುವ ಬಗ್ಗೆ ನನಗೆ ಗೊತ್ತಿತ್ತು. ನಿಪಿ 15 ರ ವಿರುದ್ದ ಮೇಲ್ಮನವಿ ಸಲ್ಲಿಸಿರುವ ವಿಚಾರವನ್ನು ನಾನು ತಿಳಿಸಿರುವುದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಪ್ರತಿವಾದಿಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸರಿ.ಇದೆ.

(ವಾಣಿ ಎ ಶೆಟ್ಟಿ)
8 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ.